815
159

| ಕರ್ನಾಟಕ ವಿಧಾನ ಪರಿಷತ್ತು | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 496 (655) |
| ಸದಸ್ಯರ ಹೆಸರು | : | ಡಾ:ಎಂ.ಜಿ.ಮುಳೆ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 20.08.2026 |
| ಉತ್ತರಿಸುವವರು | : | ಮುಖ್ಯಮಂತ್ರಿಯವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಒಟ್ಟು 72,186 ಹುದ್ದೆಗಳ (ಆರ್ಥಿಕ ಇಲಾಖೆ ಸಹಮತಿಸಿದ 40,009 ಹಾಗೂ ಕಲ್ಯಾಣ-ಕರ್ನಾಟಕ ವೃಂದದ 32,177) ನೇಮಕಾತಿಗೆ ಅನುಮೋದನೆ ನೀಡಲಾಗಿದೆಯೇ; ಹಾಗಿದ್ದಲ್ಲಿ, ಇಲಾಖಾವಾರು ವಿವರಗಳನ್ನು ಒದಗಿಸುವುದು; | ಹೌದು<br><br>ಇಲಾಖಾವಾರು ವಿವರಗಳನ್ನು **<u>ಅನುಬಂಧ-1</u>** ರಲ್ಲಿ ಒದಗಿಸಿದೆ. |
| ಆ) | ನೇರ ನೇಮಕಾತಿಗಳನ್ನು ತ್ವರಿತಗೊಳಿಸಲು ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರಿಗೆ ಜವಾಬ್ದಾರಿ ನೀಡಲಾಗಿದೆಯೇ; ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ರೂಪಿಸಲಾಗಿರುವ ನಿರ್ದಿಷ್ಟ ಕ್ರಿಯಾ ಯೋಜನೆ (Action Plan) ಕುರಿತು ಮಾಹಿತಿ ಒದಗಿಸುವುದು; | ಹೌದು. ನೇಮಕಾತಿ ಪ್ರಕ್ರಿಯೆಗಳನ್ನು ತುರ್ತಾಗಿ ಪೂರ್ಣಗೊಳಿಸಲು ಇಲಾಖೆಗಳಿಗೆ ಈಗಾಗಲೇ ದಿನಾಂಕ: 24.06.2026 ರ ಸರ್ಕಾರದ ಆದೇಶದಲ್ಲಿ ಸೂಚಿಸಲಾಗಿದ.<br><br>ಎಲ್ಲಾ ನೇಮಕಾತಿ ಪ್ರಕ್ರಿಯೆಗಳನ್ನು 6 ತಿಂಗಳಲ್ಲಿ ನೇಮಕಾತಿ ಪೂರ್ಣಗೊಳಿಸಲು ಸರ್ಕಾರದ |
| ಇ) | 2 ತಿಂಗಳಲ್ಲಿ ಅಧಿಸೂಚನೆ 4 ತಿಂಗಳಲ್ಲಿ ಪರೀಕ್ಷೆ ಹಾಗೂ 6 ತಿಂಗಳಲ್ಲಿ ನೇಮಕಾತಿ ಪೂರ್ಣಗೊಳಿಸಲು ಕಾಲಮಿತಿ ನಿಗದಿಪಡಿಸಲಾಗಿದೆಯೇ; ಯಾವುದೇ ವಿಳಂಬವಾಗದಂತೆ ಸರ್ಕಾರ ಕೈಗೊಂಡಿರುವ ಮುಂಜಾಗ್ರತಾ ಕ್ರಮಗಳೇನು; | ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರಿಗೆ ಜವಾಬ್ದಾರಿ ನೀಡಲಾಗಿದೆ |
| ಈ | ಈ ಬೃಹತ್ ನೇಮಕಾತಿಯಲ್ಲಿ ಅಕ್ರಮ ಮತ್ತು ಭ್ರಷ್ಟಾಚಾರ ತಡೆದು ಸಂಪೂರ್ಣ ಪಾರದರ್ಶಕತೆ ಕಾಯ್ದುಕೊಳ್ಳಲು ಸರ್ಕಾರ ಜಾರಿಗೆ ತರುತ್ತಿರುವ ಕಟ್ಟುನಿಟ್ಟಿನ ಸುರಕ್ಷತಾ ನಿಯಮಾವಳಿಗಳು ಯಾವುವು? | ನೇಮಕಾತಿಯಲ್ಲಿ ಅಕ್ರಮ ಮತ್ತು ಭ್ರಷ್ಟಾಚಾರ ತಡೆದು ಸಂಪೂರ್ಣ ಪಾರದರ್ಶಕತೆ ಕಾಯ್ದುಕೊಳ್ಳಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ:-<br><br>1. ಲೈವ್ ಸ್ಟ್ರೀಮಿಂಗ್-ಸಿಸಿಟಿವಿ<br>2. ಮುಖ ಚಹರೆ ತಂತ್ರಜ್ಞಾನ<br>3. ಓಎಂಆರ್ ಶೀಟ್ ಅಪಲೋಡ್: ಪರೀಕ್ಷೆ ಮುಗಿದ ದಿನವೇ ಅಭ್ಯರ್ಥಿಗಳ ಓಎಂ ಆರ್ ಶೀಟ್‌ಗಳನ್ನು ಕೆಇಎ ವೆಬ್‌ಸೈಟ್‌ಗೆ ಅಪ್‌ಲೋಡ್ ಮಾಡುವ ಮೂಲಕ ಪರೀಕ್ಷಾ ನಂತರದ ಅಕ್ರಮಗಳ ಆರೋಪಗಳಿಗೆ ತಡೆ ಹಾಕಲಾಗಿದೆ.<br>4. 5ನೇ ವೃತ್ತಕ್ಕೆ ಕಡ್ಡಾಯ ಶೇಡ್: ನೇಮಕಾತಿ ಪರೀಕ್ಷೆಗಳಲ್ಲಿ ಪಾರದರ್ಶಕತೆ ತರುವ ಉದ್ದೇಶದಿಂದ ಉತ್ತರಿಸದೇ ಇರುವ ಪ್ರಶ್ನೆಗಳಿಗೆ ಕಡ್ಡಾಯವಾಗಿ ಐದನೇ ವೃತ್ತವನ್ನು ಶೇಡ್ ಮಾಡುವ ವ್ಯವಸ್ಥೆ ಜಾರಿಮಾಡಲಾಗಿದೆ. ಈ ಮೂಲಕ ಪರೀಕ್ಷೆ ನಂತರದ ಅಕ್ರಮಗಳಿಗೆ ಕಡಿವಾಣ ಹಾಕುವುದರ ಜೊತೆಗೆ ಪಾರದರ್ಶಕತೆಗೆ ಒತ್ತುಕೊಟ್ಟಂತಾಗುತ್ತದೆ.<br>5. Frisking-ಪರೀಕ್ಷೆಗೆ ಡ್ರೆಸ್ ಕೋಡ್ ಮತ್ತು ನಿಷೇಧಿತ ವಸ್ತುಗಳು. ನಿಷೇಧಿತ ವಸ್ತುಗಳನ್ನು ಕೊಂಡೊಯ್ಯಲು ಅನುಮೋದಿಸಲಾಗುವುದಿಲ್ಲ. |

| | | |
|---|---|---|
| | | 6. ಜಾಮರ್ ಯಂತ್ರಗಳ ಅಳವಡಿಕೆ.<br><br>ನೇಮಕಾತಿಯಲ್ಲಿ ಅಕ್ರಮ ಮತ್ತು ಭ್ರಷ್ಟಾಚಾರ ತಡೆದು ಸಂಪೂರ್ಣ ಪಾರದರ್ಶಕತೆ ಕಾಯ್ದುಕೊಳ್ಳಲು ಕರ್ನಾಟಕ ಲೋಕಸೇವಾ ಆಯೋಗವು ಕೈಗೊಳ್ಳುತ್ತಿರುವ ಕ್ರಮಗಳನ್ನು ಅನುಬಂಧ-3 ರಲ್ಲಿ ಒದಗಿಸಿದ. |

**ಕಡತ ಸಂಖ್ಯೆ: ಸಿಆಸುಇ 255 ರಾಸ 2026**

**(ಡಿ.ಕೆ. ಶಿವಕುಮಾರ್)**
ಮುಖ್ಯಮಂತ್ರಿ

# ಅನುಬಂಧ-1

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಡಾ: ಎಂ.ಜಿ.ಮುಳೆ (ವಿಧಾನ ಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 496 (655) ಕ್ಕೆ ಮಾಹಿತಿ

## ಆರ್ಥಿಕ ಇಲಾಖೆಯಿಂದ ಅನುಮೋದನೆಗೊಂಡ ನೇರ ನೇಮಕಾತಿ ಹುದ್ದೆಗಳು ಹಾಗೂ ಕಲ್ಯಾಣ ಕರ್ನಾಟಕ ವೃಂದದ ಬಾಕಿ ಇರುವ ಹುದ್ದೆಗಳ ಇಲಾಖಾವಾರು ವಿವರ

| ನೇರ ನೇಮಕಾತಿ ವಿವರಗಳು (Direct Recruitment Details) | | | | |
|---|---|---|---|---|
| | | | | |
| ಕ್ರ. ಸಂ. | ಇಲಾಖೆಗಳು | ಆರ್ಥಿಕ ಇಲಾಖೆಯಿಂದ ನೇರ ನೇಮಕಾತಿಗಾಗಿ ಅನುಮೋದನೆಗೊಂಡ ಹುದ್ದೆಗಳು | ನೇರ ನೇಮಕಾತಿಗೆ ಬಾಕಿ ಇರುವ ಕಲ್ಯಾಣ ಕರ್ನಾಟಕ ವೃಂದದ ಹುದ್ದೆಗಳು | ಒಟ್ಟು |
| 1 | ಕೃಷಿ ಇಲಾಖೆ | 980 | 810 | 1,790 |
| 2 | ಪಶು ಸಂಗೋಪನ ಇಲಾಖೆ | 42 | 182 | 224 |
| 3 | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ | 229 | 29 | 258 |
| 4 | ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ | 35 | 0 | 35 |
| 5 | ಸಹಕಾರ ಇಲಾಖೆ | 203 | 373 | 576 |
| 6 | ಸಿ.ಆ.ಸು. ಇಲಾಖೆ | 58 | 107 | 165 |
| 7 | ಇಂಧನ ಇಲಾಖೆ | 3,036 | 2,645 | 5,681 |
| 8 | ಆರ್ಥಿಕ ಇಲಾಖೆ | 2,750 | 841 | 3,591 |
| 9 | ಅರಣ್ಯ ಇಲಾಖೆ | 1,140 | 65 | 1,205 |
| 10 | ಪರಿಸರ ಮತ್ತು ಜೈವಿಕಶಾಸ್ತ್ರ ಇಲಾಖೆ | 92 | 0 | 92 |
| 11 | ಮೀನುಗಾರಿಕೆ ಇಲಾಖೆ | 0 | 43 | 43 |
| 12 | ಕೈಮಗ್ಗ ಮತ್ತು ಜವಳಿ ಇಲಾಖೆ | 12 | 0 | 12 |
| 13 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ | 1,623 | 1,104 | 2,727 |
| 14 | ಉನ್ನತ ಶಿಕ್ಷಣ ಇಲಾಖೆ | 2,058 | 1,496 | 3,554 |
| 15 | ಒಳಾಡಳಿತ ಇಲಾಖೆ | 5,557 | 1,402 | 6,959 |
| 16 | ತೋಟಗಾರಿಕೆ ಇಲಾಖೆ | 80 | 134 | 214 |
| 17 | ವಸತಿ ಇಲಾಖೆ | 38 | 20 | 58 |
| 18 | ಕನ್ನಡ ಮತ್ತು ಸಂಸ್ಕೃತಿ ಇಲಾಖೆ | 6 | 7 | 13 |
| 19 | ಕಾರ್ಮಿಕ ಇಲಾಖೆ | 7 | 180 | 187 |
| 20 | ಕಾನೂನು ಇಲಾಖೆ | 107 | 9 | 116 |
| 21 | ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಬೃಹತ್) | 42 | 45 | 87 |
| 22 | ಜಲ ಸಂಪನ್ಮೂಲ ಇಲಾಖೆ | 122 | 532 | 654 |
| 23 | ವೈದ್ಯಕೀಯ ಶಿಕ್ಷಣ ಇಲಾಖೆ | 535 | 2,219 | 2,754 |
| 24 | ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಗಣಿ) | 3 | 0 | 3 |
| 25 | ಸಣ್ಣ ನೀರಾವರಿ ಇಲಾಖೆ | 21 | 13 | 34 |
| 26 | ಅಲ್ಪಸಂಖ್ಯಾತರ ಅಭಿವೃದ್ಧಿ ಇಲಾಖೆ | 1,618 | 543 | 2,161 |
| 27 | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | 396 | 487 | 883 |
| 28 | ಕಂದಾಯ ಇಲಾಖೆ | 2,370 | 390 | 2,760 |
| 29 | ಸಮಾಜ ಕಲ್ಯಾಣ ಇಲಾಖೆ | 1,365 | 425 | 1,790 |
| 30 | ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆ | 8,003 | 10,807 | 18,810 |
| 31 | ರೇಷ್ಮೆ ಇಲಾಖೆ | 15 | 98 | 113 |
| 32 | ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ | 184 | 43 | 227 |
| 33 | ಪ್ರವಾಸೋದ್ಯಮ ಇಲಾಖೆ | 5 | 2 | 7 |
| 34 | ಸಾರಿಗೆ ಇಲಾಖೆ | 6,847 | 2,909 | 9,756 |
| 35 | ನಗರಾಭಿವೃದ್ಧಿ ಇಲಾಖೆ | 130 | 3,080 | 3,210 |
| 36 | ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ | 296 | 53 | 349 |

| | | | | |
|---|---|---|---|---|
| 37 | ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ | 4 | 7 | 11 |
| 38 | ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (MSME) | 0 | 648 | 648 |
| 39 | ಲೋಕೋಪಯೋಗಿ ಇಲಾಖೆ | 0 | 0 | 0 |
| 40 | ಕೌಶಲ್ಯಾ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ | 0 | 204 | 204 |
| 41 | ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ | 0 | 106 | 106 |
| 42 | ಯೋಜನೆ ಇಲಾಖೆ | 0 | 55 | 55 |
| 43 | ಸಿ.ಆ.ಸು. ಇಲಾಖೆ (ಆಡಳಿತ ಸುಧಾರಣೆ) | 0 | 0 | 0 |
| 44 | ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ | 0 | 31 | 31 |
| 45 | ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ) | 0 | 12 | 12 |
| 46 | ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ | 0 | 0 | 0 |
| 47 | ಸಿ.ಆ.ಸು. ಇಲಾಖೆ (ಇ-ಆಡಳಿತ) | 0 | 9 | 9 |
| 48 | ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ | 0 | 1 | 1 |
| 49 | ಸಂಸದೀಯ ವ್ಯವಹಾರಗಳ ಇಲಾಖೆ | 0 | 5 | 5 |
| 50 | ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ, ಹೆಬ್ಬಾಳ, ಬೆಂಗಳೂರು | 0 | 2 | 2 |
| 51 | ವಿಧಾನ ಸಭೆ ಸಚಿವಾಲಯ | 0 | 4 | 4 |
| | **ಒಟ್ಟು** | **40,009** | **32,177** | **72,186** |

# <u>ಅನುಬಂಧ -3</u>

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಡಾ: ಎಂ.ಜಿ.ಮುಳೆ ( ವಿಧಾನ ಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 496 (655) ಕ್ಕೆ ಮಾಹಿತಿ**

**ನೇಮಕಾತಿಯಲ್ಲಿ ಅಕ್ರಮ ಮತ್ತು ಭ್ರಷ್ಟಾಚಾರ ತಡೆಯುವ ಸಂಬಂಧ ಪಾರದರ್ಶಕತೆ ಕಾಯ್ದುಕೊಳ್ಳಲು ಕೆ.ಪಿ.ಎಸ್.ಸಿ. ಕೈಗೊಂಡ ಸುರಕ್ಷಾ ಕ್ರಮಗಳು**

- ಕರ್ನಾಟಕ ಲೋಕಸೇವಾ ಆಯೋಗದಲ್ಲಿ ಜಾರಿಯಲ್ಲಿರುವ ವ್ಯವಸ್ಥೆ ಮತ್ತು ಪ್ರಕ್ರಿಯೆಗಳನ್ನು ಪರಿಷ್ಕರಿಸುವ ಉದ್ದೇಶದಿಂದ ಕರ್ನಾಟಕ ಸರ್ಕಾರವು ರಚಿಸಿದ್ದ ಶ್ರೀ ಪಿ.ಸಿ. ಹೋಟಾ ಸಮಿತಿಯು ನೀಡಿರುವ ವರದಿಯ ಆಧಾರದ ಮೇಲೆ **ನೇಮಕಾತಿಗಳಲ್ಲಿ ಪಾರದರ್ಶಕತೆಯನ್ನು ತರಲು ಗೌಪ್ಯ ಕಾರ್ಯಗಳನ್ನು ನಿರ್ವಹಿಸಲು** ಒಂದು **ಪರೀಕ್ಷಾ ನಿಯಂತ್ರಕರ ಹುದ್ದೆಯನ್ನು ಸೃಜಿಸಲಾಗಿರುತ್ತದೆ** ಮತ್ತು ಸದರಿ ಹುದ್ದೆಯನ್ನು ಭಾರತೀಯ ಆಡಳಿತ ಸೇವೆಯ ಅಧಿಕಾರಿಯವರಿಂದ ಭರ್ತಿ ಮಾಡಲಾಗುತ್ತಿದೆ.

- ಆಯೋಗದಲ್ಲಿನ ಪರೀಕ್ಷಾ ಪೂರ್ವ ಮತ್ತು ಪರೀಕ್ಷೋತ್ತರ ಗೌಪ್ಯ ಕಾರ್ಯಗಳ ಮೇಲೆ ನಿಗಾ ವಹಿಸಲು, ಪಾರದರ್ಶಕತೆಯನ್ನು ಕಾಪಾಡಲು ಹಾಗೂ ಮಾಹಿತಿ ಸೋರಿಕೆಯನ್ನು ತಡೆಗಟ್ಟುವ ಸಲುವಾಗಿ ಗೌಪ್ಯ ಶಾಖೆಗಳಿಗೆ ಪ್ರತ್ಯೇಕವಾದ ಸ್ಥಳಾವಕಾಶವನ್ನು ಕಲ್ಪಿಸಲಾಗಿದ್ದು ಅಲ್ಲಿಗೆ ಅಧಿಕೃತ ವ್ಯಕ್ತಿಗಳನ್ನು ಹೊರತುಪಡಿಸಿ ಆಯೋಗದ ಇತರೆ ಅಧಿಕಾರಿ/ಸಿಬ್ಬಂದಿಗಳಾಗಲೀ ಹಾಗೂ ಇನ್ನಿತರ ವ್ಯಕ್ತಿಗಳ ಪ್ರವೇಶವನ್ನು ನಿರ್ಬಂಧಿಸಲಾಗಿದೆ ಹಾಗೂ ಗೌಪ್ಯ ಕಾರ್ಯಗಳ ಮೇಲೆ ನಿಗಾ ವಹಿಸಲು ಮತ್ತು ಅನಧಿಕೃತ ವ್ಯಕ್ತಿಗಳ ಪ್ರವೇಶವನ್ನು ನಿರ್ಬಂಧಿಸಲು ಹಾಗೂ ಮೊಬೈಲ್ ಫೋನ್ ಕೊಂಡೊಯ್ಯುವುದನ್ನು ತಡೆಗಟ್ಟಲು ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಿ, 24*7 C.C.T.V. Surveillance ವ್ಯವಸ್ಥೆಯನ್ನು ಕಲ್ಪಿಸಲಾಗಿರುತ್ತದೆ.

- ಆಯೋಗದ ಪರೀಕ್ಷೆಗಳನ್ನು ನಡೆಸುವಂತಹ ಪರೀಕ್ಷಾ ಉಪಕೇಂದ್ರಗಳಲ್ಲಿ ಅಕ್ರಮಗಳನ್ನು ತಡೆಗಟ್ಟಲು ಮತ್ತು ದುರಾಚಾರ ಪ್ರಕರಣಗಳನ್ನು ನಿಯಂತ್ರಿಸಲು ಪ್ರತಿ ಪರೀಕ್ಷಾ ಕೊಠಡಿಗಳಿಗೆ ಮತ್ತು ನಿಯಂತ್ರಣ ಕೊಠಡಿಗೆ ಸಿ.ಸಿ.ಕ್ಯಾಮೆರಾಗಳನ್ನು ಅಳವಡಿಸಲಾಗುತ್ತಿದ್ದು ಮತ್ತು ನೇರ ದೃಶ್ಯಾವಳಿಗಳನ್ನು ಆಯೋಗದ ಕೇಂದ್ರ ಕಛೇರಿಯಲ್ಲಿ ಸ್ಥಾಪಿಸಲಾಗಿರುವ ಕಮಾಂಡ್ ಸೆಂಟರ್‌ನಲ್ಲಿ ವೀಕ್ಷಿಸಲಾಗುತ್ತದೆ.

- ಪರೀಕ್ಷೆ ನಡೆಯುವ ಮುನ್ನ ಪ್ರಶ್ನೆ ಪತ್ರಿಕೆ ಪರೀಕ್ಷಾ ಕೇಂದ್ರದಲ್ಲಿ ಸ್ವೀಕೃತವಾದ ಸಮಯದಿಂದ ಹಿಡಿದು ಪರೀಕ್ಷೆಗಳನ್ನು ಮುಗಿಸಿ ಪರೀಕ್ಷಾ ಸಾಮಗ್ರಿಗಳನ್ನು ಆಯೋಗಕ್ಕೆ ರವಾನಿಸುವವರೆಗಿನ ಸಂಪೂರ್ಣ ಪ್ರಕ್ರಿಯೆಗಳನ್ನು Time Stamp ವಿಡಿಯೋಗ್ರಫಿ ಮಾಡಿಸಲಾಗುತ್ತಿದೆ. ಇದಲ್ಲದೆ ಅಭ್ಯರ್ಥಿಗಳು ಪರೀಕ್ಷೆ ಬರೆಯುವ ಸಂದರ್ಭದಲ್ಲಿಯೂ ಎಲ್ಲಾ ಕೊಠಡಿಗಳಲ್ಲಿಯೂ ವಿಡಿಯೋಗ್ರಾಫರ್ ಮುಖಾಂತರ ವಿಡಿಯೋ ಚಿತ್ರೀಕರಣ ಮಾಡಿಸಲಾಗುತ್ತಿದೆ.

- ಆಯೋಗದ ಪರೀಕ್ಷೆಗಳಿಗೆ ಅಭ್ಯರ್ಥಿಗಳು ಮೊಬೈಲ್, ಬ್ಲೂಟೂತ್ ಮತ್ತು ಇನ್ನಿತರೆ ಆಧುನಿಕ ಸಂವಹನ ಉಪಕರಣಗಳನ್ನು ಬಳಸಿ ದುರಾಚಾರ ಪ್ರಕರಣಗಳನ್ನು ಎಸಗುವುದನ್ನು ತಡೆಗಟ್ಟುವ ಸಲುವಾಗಿ ಭಾರತ ಸರ್ಕಾರದ ECIL/BEL ಸಂಸ್ಥೆಯಿಂದ ಪರೀಕ್ಷಾ ಉಪಕೇಂದ್ರಗಳಲ್ಲಿ ರೂಂ-ಜಾಮರ್‌ಗಳನ್ನು ಅಳವಡಿಸಲಾಗುತ್ತಿದೆ ಹಾಗೂ HHMD (Hand Held Metal Detector) ಯಂತ್ರದ ಸಹಾಯದಿಂದ ಅಭ್ಯರ್ಥಿಗಳು ಪರೀಕ್ಷಾ ಕೊಠಡಿಗೆ ಪ್ರವೇಶಿಸುವ ಮುನ್ನ ಪ್ರತಿ ಅಭ್ಯರ್ಥಿಯ ಸಂಪೂರ್ಣ ತಪಾಸಣೆ ಮಾಡಿಸಲಾಗುತ್ತಿದೆ. ಆಯೋಗದ ಪರೀಕ್ಷೆಗಳಲ್ಲಿ ಅಭ್ಯರ್ಥಿಗಳ Impersonation ತಪ್ಪಿಸುವ ಸಲುವಾಗಿ Face Recognition/ Bio-metric ಹಾಜರಾತಿ ತೆಗೆದುಕೊಳ್ಳುವ ಪದ್ಧತಿಯನ್ನು ಜಾರಿ ಮಾಡಲಾಗಿರುತ್ತದೆ.

- ಆಯೋಗದ ಕಛೇರಿಗೆ ಅನಧಿಕೃತ ವ್ಯಕ್ತಿಗಳ ಪ್ರವೇಶವನ್ನು ಮತ್ತು ಅಭ್ಯರ್ಥಿಗಳು ಆಯೋಗದ ಅಧಿಕಾರಿ/ಸಿಬ್ಬಂದಿಗಳನ್ನು ಭೇಟಿ ಮಾಡುವುದು ಮತ್ತು ವಿನಾ ಕಾರಣ ಆಯೋಗದ ಕಛೇರಿಗೆ ಆಗಮಿಸುವುದನ್ನು ತಡೆಗಟ್ಟುವ ಸಲುವಾಗಿ ಆಯೋಗದ ಕಛೇರಿಗೆ ಸಾರ್ವಜನಿಕರ ಪ್ರವೇಶವನ್ನು ನಿರ್ಬಂಧಿಸಲಾಗಿದೆ.

---